## 1.

**ಅಹುದಾದರಹುದೆನ್ನಿ ಅಲ್ಲವಾದರಲ್ಲವೆನ್ನಿ**

**ಬಹುಜನರು ನೆರೆತಿಳಿದು ಪೇಳಿ ಮತ್ತಿದನು | ಪ |**

ದೇವರಿಲ್ಲದ ಗುಡಿಯು ಹಾಳುಬಿದ್ದಂಗಡಿಯು

ಭಾವವಿಲ್ಲದ ಭಕುತಿಯದು ಕುಹಕಯುಕುತಿ

ಹೇವವಿಲ್ಲದ ಹೆಣ್ಣು ಗಜುಗಬೆಳೆದಾ ಕಣ್ಣು

ಸೇವೆಯರಿಯದ ಧಣಿಯು ಕಲ್ಲಿನಾ ಖಣಿಯು | ೧ |

ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು

ನಿರ್ಮಳಲ್ಲದ ಮನಸು ಅದು ಕಜ್ಜಿತಿನಿಸು

ಶರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು

ಮರ್ಮವಿಲ್ಲದ ಮಾತು ಒಡಮೊಗೆಯ ತೂತು | ೨ |

ಮಕ್ಕಳಿಲ್ಲದ ತಾಯಿ ಕೊಳೆತ ತೆಂಗಿನಕಾಯಿ

ಸೌಖ್ಯವಿಲ್ಲದ ಕೂಟ ಅದು ಕಾಳಕೂಟ

ಒಕ್ಕಲಿಲ್ಲದ ಊರು ಹಡಿಕೆನಾರುವ ನೀರು

ಸೊಕ್ಕಿ ನಡೆಯುವ ಭೃತ್ಯ ಅವ ಕ್ರೂರಕೃತ್ಯ | ೩ |

ಕಂಡು ಕರೆಯದ ನಂಟ ಮೊನೆಯ ಕೆಟ್ಟಿಹ ಕಂಟ

ಉಂಡು ನಗದಿಹ ಮೋರೆ ಅದು ಕಹಿಯ ಸೋರೆ

ದಂಡಿಗಂಜುವ ಬಂಟ ಒಡೆದ ಹರವಿಯ ಕಂಟ

ಗಂಡಗಂಜದ ನಾರಿಯವಳೆ ಹೆಮ್ಮಾರಿ |೪|

ಬಿಟ್ಟು ಅಡಗುವ ಗೆಣೆಯು ಹರುಕು ತೊಗಲಿನ ಮಿಣೆಯು

ಕೊಟ್ಟು ಪೇಳುವ ದಾತ ಅವ ಹೀನಜಾತ

ಸೃಷ್ಟಿಯೊಳು ಕಾಗಿನೆಲೆಯಾದಿಕೇಶವನಂಘ್ರಿ

ಬಿಟ್ಟು ನೆನೆದಾ ನರನು ಅವ ಕಾಡುಮರನು |೫|

---

**2. ಇಷ್ಟುದಿನ ಈ ವೈಕುಂಠ ಎಷ್ಟು ದೂರವೋ ಎನ್ನುತಲಿದ್ದೆ ದೃಷ್ಟಿಯಿಂದಲಿ ನಾನು ಕಂಡೆ ಸೃಷ್ಟಿ ಈಶನೆ ಶ್ರೀರಂಗಶಾಯಿ। ಪ ।**

ಎಂಟು ಏಳನು ಕಳೆದುದ ಕಂಡೆ ಬಂಟರೈವರ ತುಳಿದುದ ಕಂಡೆ

ಕಂಟಕನೊಬ್ಬನ ತರಿದುದ ಕಂಡೆ ಬಂಟನಾಗಿ ಬಂದೆನೊ ರಂಗಶಾಯಿ |೧|

ವನ ಉಪವನಗಳ ಕಂಡೆ ಘನ ಸರೋವರಗಳಿಂದ ಕಂಡೆ

ಕನಕ ಗೋಪುರಗಳಿಂದ ಘನಶೋಭಿತನೆ ರಂಗಶಾಯಿ |೨|

ವಜ್ರವೈಢೂರ್ಯದ ತೊಲೆಗಳ ಕಂಡೆ ಪ್ರಜ್ವಲಿಪ ಮಹಾದ್ವಾರವ ಕಂಡೆ

ನಿರ್ಜರಾದಿ ಮುನಿಗಳ ಕಂಡೆ ದುರ್ಜನಾಂತಕನೆ ಶ್ರೀರಂಗಶಾಯಿ |೩|

ರಂಭೆ ಊರ್ವಶಿಯರ ಮೇಳವ ಕಂಡೆ ತುಂಬುರು ಮುನಿ ನಾರದರನು ಕಂಡೆ

ಅಂಬುಜೋದ್ಭವ ರುದ್ರರ ಕಂಡೆ ಶಂಬರಾರಿಪಿತನೆ ರಂಗಶಾಯಿ |೪|

ನಾಗಶಯನನ ಮೂರುತಿ ಕಂಡೆ ಭೋಗಿಭೂಷಣ ಶಿವನನು ಕಂಡೆ

ಭಾಗವತರ ಸಮ್ಮೇಳವ ಕಂಡೆ ಕಾಗಿನೆಲೆಯಾದಿಕೇಶವ ರಂಗಶಾಯಿ |೫|

**3.**

**ಕುಲಕುಲ ಕುಲವೆನ್ನುತಿಹರೊ ಕುಲವಾವುದು ಸತ್ಯ ಸುಜನರಿಗೆ |ಪ|**

ಕೆಸರೊಳು ತಾವರೆ ಪುಟ್ಟಲು ಅದತಂದು ಕುಸುಮನಾಭನಿಗೆ ಅರ್ಪಿಸರೇನಯ್ಯ
ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ ವಸುದೆಯೊಳಗೆ ಭೂಸುರರುಣ್ಣರೇನಯ್ಯ |೧|
ಆ ಶೌಂಡಿಲ್ಯ ಪರಾಶರ ಎನಿಪನು ವೇಶ್ಯಯ ಪುತ್ರ ವಸಿಷ್ಠಮುನಿ
ದಾಸಿಯ ನಂದನ ನಾರದ ಎನಿಪನು ಕಾಶ್ಯಪ ಪೌತ್ರನ ಕುಲ ಹೇಳಿರಯ್ಯ |೨|
ಆತ್ಮ ಯಾವ ಕುಲ ಜೀವ ಯಾವ ಕುಲ ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮನು ಕಾಗಿನೆಲೆಯಾದಿಕೇಶವನೊಲಿದ ಭಕ್ತರಿಗೆ ಕುಲವಾಗುವುದು ಹೇಳಿರಯ್ಯ |೩|

---

**4.**

**ತಲ್ಲಣಿಸದಿರು ಕಂಡ್ಯ ತಾಳು ಮನವೆ ಸ್ವಾಮಿ**
**ನಿಲ್ಲದಲೆ ರಕ್ಷಿಸುವ ಸಂದೇಹ ಬೇಡ |ಪ|**

ಬೆಟ್ಟದ ತುದಿಯಲ್ಲಿ ಬೆಳೆದ ವೃಕ್ಷಂಗಳಿಗೆ
ಕಟ್ಟೆಕಟ್ಟುತ ನೀರ ಹೊಯ್ಯುವರಾರು
ಹುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾದಮೇಲೆ
ಕೊಟ್ಟು ರಕ್ಷಸುವನು ಇದಕೆ ಸಂದೇಹ ಬೇಡ |೧|
ಅಡವಿಯೊಳಾಡುವ ಮೃಗಜಾತಿ ಪಕ್ಷಿಗಳಿಗೆ
ಅಡಿಅಡಿಗೆ ಆಹಾರವಿತ್ತವರಾರು
ಪಡೆದ ಜನನಿಯಂತೆ ಸಾರಥಿಯಾಗಿ ತಾ

ಬಿಡದೆ ರಕ್ಷಿಸುವನು ಇದಕೆ ಸಂದೇಹ ಬೇಡ | ೨ |
ಕಲ್ಲೊಳಗೆ ಪುಟ್ಟಿ ಕೂಗುವ ಮಂಡೂಕಂಗಳಿಗೆ
ಅಲ್ಲಿ ಹೋಗಿ ಆಹಾರವಿತ್ತವರದಾರು
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ನಿಲ್ಲದೇ ರಕ್ಷಿಪನು ಇದಕೆ ಸಂದೇಹ ಬೇಡ | ೩ |

---

## 5.

ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ | ಪ |
ಬಯಲು ಆಲಯದೊಳಗೊ ಆಲಯವು ಬಯಲೊಳಗೆ
ಬಯಲು ಆಲಯವೆರಡು ನಯನದೊಳಗೊ
ನಯನ ಬುದ್ಧಿಯ ಒಳಗೊ ಬುದ್ಧಿ ನಯನದ ಒಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಕೃಷ್ಣಾ | ೧ |
ಸವಿಯು ಸಕ್ಕರೆಯೊಳಗೆ ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ
ಜಿಹ್ವೆ ಬುದ್ಧಿಯ ಒಳಗೊ ಬುದ್ಧಿ ಜಿಹ್ವೆಯ ಒಳಗೊ
ಜಿಹ್ವೆ ಬುದ್ಧಿಗಳೆರಡು ನಿನ್ನೊಳಗೊ ಕೃಷ್ಣಾ | ೨ |
ಕುಸುಮದೊಳು ಗಂಧವೊ ಗಂಧದೊಳು ಕುಸುಮವೊ
ಕುಸುಮ ಗಂಧಗಳೆರಡು ಘ್ರಾಣದೊಳ
ಅಸಮಭವ ಕಾಗಿನೆಲೆಯಾದಿಕೇಶವರಾಯ
ಉಸುರಲಿನಳವಲ್ಲ ಎಲ್ಲ ನಿನ್ನೊಳಗೊ ಕೃಷ್ಣಾ | ೩ |

---

6.

ಯಾದವರಾಯ ಬೃಂದಾವನದೊಳು  ವೇಣು ನಾದವ ಮಾಡುತಿರೆ      | ಪ |

ರಾಧೆ ಮುಂತಾದ ಗೋಪಿಯರೆಲ್ಲ ಮಧುಸೂದನ ನಿನ್ನನು ಸೇವುಸುತಿರೆ   |ಅಪ|

ಸುರರು ಅಂಬರದಿ ಸಂದಣಿಸಿರೆ ಅಪ್ಸರ ಸ್ತ್ರೀಯರು ಮೈಮರೆದಿರೆ

ಕರದಲ್ಲಿ ಕೊಳಲನೂದುತ್ತ ಪಾಡುತ್ತ ಸರಿಗಮಪದನಿ ಸ್ವರಘಲ ನುಡಿಸುತ್ತ | ೧ |

ಪರಬ್ರಹ್ಮರು ನಲಿದಾಡುತಿರೆ ತುಂಬುರು ನಾರದರು ಪಾಡುತಿರೆ

ಪರಿಪರಿ ವಿಧದಲ್ಲಿ ರಾಗವ ನುಡಿಸುತ ತುರುಹಿಂಡುಗಳ ಕೂಡುತ ಪಾಡುತ | ೨ |

ತುರುಹಿಂಡುಗಳ ತರತರದಲಿ ತನಕರದಿಂ ಬೋಳೈಸಿ ಸಂತೈಸುತಲಿ

ಅರವಿಂದದಳಯನ ಆದಿಕೇಶವರಾಯ ಕರುಗಳ ಸಹಿತ ಗೋವ್ಗಳನೆಲ್ಲ ತಿರುಹುತ |೩|

7.

ಬಂದೆವಯ್ಯ ಗೋವಿಂದಶೆಟ್ಟಿ | ಪ |

ಇಂದು ನಿಮ್ಮ ಹರಿವಾಣಪ್ರಸಾದವುಂಟೆನಲಾಗಿ | ಅಪ |

ಅಪ್ಪಾಲು ಅತಿರಸ ತುಪ್ಪ ಕಜ್ಜಾಯವು

ಒಪ್ಪುವ ಯಾಲಕ್ಕಿ ಶುಂಠಿ ಮೆಣಸು

ಅಪ್ಪರೂಪವಾದ ಕಜ್ಜಾಯ ರಾಶಿಗಳ

ಛಪ್ಪನದೇಶಕೆ ಮಾರುವ ಶೆಟ್ಟಿ | ೧ |

ಒಡೆದ ಮಡಕೆಯನು ಇಡದೆ ನಾಮವಮಾಡಿ

ಕೊಡುವೆ ನೀ ಕಾಸಿಗೆ ಒಂದೋಂದನು

ಒಡಲು ತುಂಬಿ ಮಿಕ್ಕ ಅನವ ಮಾರಿಸಿ

ಒಡವೆಯ ಗಳಿಸುವ ಕಡುಲೋಭಿಶೆಟ್ಟಿ | ೨ |

ಶೇಷಗಿರಿಯ ಮೇಲೆ ಇಪ್ಪ ತಿಮ್ಮಶೆಟ್ಟಿ

ದೇಶಕೆ ಪ್ರಾಸದವ ನಡೆಸುವ ಶೆಟ್ಟಿ

ಆಶೆಯಿಂದ ಹಣಕಾಸು ಗಳಿಸುವ ಆದಿ

ಕೇಶವ ನಾರಾಯಣ ನೆಂಬ ಶೆಟ್ಟಿ | ೩ |

---

## 8.

ನಿನಗಿಂತ ಕುಂದೇನೊ ನಮ್ಮಮ್ಮ ಜಯಲಕ್ಷ್ಮಿ | ಪ |

ಮತ್ಸ್ಯಾವತಾರ ನೀನಾದರೆ - ಆಕೆ ಮತ್ಸ್ಯಗಂಗಳೆ ತಾನಾದಳೊ

ಹೆಚ್ಚಿನ ಶಂಖವ ಪಿಡಿದರೆ - ಆಕೆ ನಿಚ್ಚ ಶಂಖದಕಂಠಳಾದಳಯ್ಯ | ೧ |

ನೀಲವರ್ಣ ನೀನಾದರೆ - ಆಕೆ ನೀಲಕುಂತಳೆ ತಾನಾದಳೊ

ಲೋಲಕಮಲನಾಭನಾದರೆ - ಆಕೆ ಬಾಲಕಮಲಮುಖಿಯಾದಳಯ್ಯ | ೨ |

ಬೆಟ್ಟವ ನೀನೊಂದು ಪೊತ್ತರೆ - ಕುಚದ ಬೆಟ್ಟಗಳೆರಡನು ತಾ ಪೊತ್ತಳೊ

ದಿಟ್ಟ ಶೇಷನ ನೀ ತುಳಿದರೆ - ಆಕೆ ಕಟ್ಟಿ ಬಾಸೆಗೆ ಶೇಷನ ನಿಲಿಸಿಹಳಯ್ಯ | ೩ |

ಗಜರಾಜವರದ ನೀನಾದರೆ - ಆಕೆ ಗಜಗಮನೆಯು ತಾನಾದಳಯ್ಯ

ನಿಜವಾದ ಸಿಂಹ ನೀನಾದರೆ - ಆಕೆ ಭಜಿಸಿ ಸಿಂಹಮಧ್ಯೆಯಾಗಿಪ್ಪಳಯ್ಯ | ೪ |

ಈ ಪರಿಯಲಿ ಬಹು ಜನಿಸಿದೆ -ಭಲೆ ಭಾಪುರೆ ಭಾಡದೊಳ್ ನೆಲೆಸಿದೆ

ಗೋಪಿಯರ ಮೋಹ ಸಲಿಸಿದೆ - ಚೆಲುವ ಶ್ರೀಪತಿ ಆದಿಕೇಶವರಾಯ ಮೆರೆದೆ | ೫|

## 9.

ನನ್ನಿಂದ ನಾನೇ ಜನಿಸಿಬಂದನೆ ದೇವ | ಪ |

ನಿನ ಪ್ರೇರಣೆಯಿಂದ ನಡೆದು ನುಡಿದ ಮೇಲೆ

ನಿನದು ತಪ್ಪೊ ಎನದು ತಪ್ಪೊ ಪರಮಾತ್ಮ | ಅಪ |

ಜನನಿಯ ಜಠರದಿ ನವಮಾಸವು

ಘನದಿ ನೀ ಪೋಷಿಸುತಿರೆ ನಾನು

ಜನಿಸಲಾರೆ ಎನೆ ಜನಿಸೆಂದಿಕ್ಕಳದಿಂದೆ

ವನಜಾಕ್ಷ ನೂಕಿದವನು ನೀನಲ್ಲವೆ ದೇವ | 1 |

ಅಂದನ ಕೈಯಲಿ ಕೋಲಿತ್ತು ಕರೆದೊಯ್ವ

ಮುಂದಾಡಿ ತಪ್ಪಿ ಗುಂಡಿಗೆ ಕೆಡಹಲು

ಅಂಧಕನು ತಪ್ಪೊ ಮುಂದಾಡಿಯ ತಪ್ಪೊ

ಹಿಂದಾಡಬೇಡ ಎನಲಿ ತಪ್ಪಿಲ್ಲವೋ ದೇವ|2|

ಕಂದನ ತಾಯಿಯ ಆಡಿಸುತಿರೆ ಪೋಗಿ

ಕಂದನು ಬಾವಿಯ ಅಂದು ನೋಡುತಿರೆ

ಬಂದು ಬೇಗದಿ ಬಿಗಿದಪ್ಪದಿರಲು ಆ ಕಂದನ

ತಪ್ಪೋ ಮಾತೆಯ ತಪ್ಪೋ ಪರಮಾತ್ಮಾ|3|

ಭರವು ನಿನದೊ ದೂರು ನಿನದೊ ಕೃಷ್ಣ

ನಾರಿ ಮಕ್ಕಳು ತನು ಮನ ನಿನವಯ್ಯ
ಕ್ಷೀರದೊಳದ್ದು ನೀರೊಳಗದ್ದು ಗೋವಿಂದ
ಹೇರನೊಪ್ಪಿದ ಮೇಲೆ ಸುಂಕವೇಕೆ ದೇವ |4|
ನ್ಯಾಯವಾದರೆ ದುಡುಕು ನಿನದೊ ಮತ್ತ-
ನ್ಯಾಯವಾದರೆ ಪೇಳುವರಾರು ?
ಕಾಯಜಪಿತ ಕಾಗಿನೆಲೆಯಾದಿಕೇಶವ
ರಾಯ ನೀ ಕಾಯಯ್ಯ ತಪ್ಪುಗಳೆಣಿಸದೆ |5|

---

೧೦.

ದೇವಿ ನಮ್ಮ ದ್ಯಾವರು ಬಂದರು  ಬನ್ನಿರೇ ನೋಡ ಬನ್ನಿರೇ |ಪ|

ಕೆಂಗಣ್ಣ ಮೀನನಾಗಿ ನಮ್ಮ ರಂಗ  ಗುಂಗಾಡಿ ಸೋಮನ ಕೊಂದಾನ್ಮ್ಯ
ಗುಂಗಾಡಿ ಸೋಮನ ಕೊಂದು ವೇದವನು ಬಂಗಾರದೊಡಲನಿಗಿತ್ತಾನ್ಮ್ಯ |೧|
ದೊಡ್ಡ ಮಡುವಿನೊಳು ನಮ್ಮ ರಂಗ ಗುಡ್ಡವ ಹೊತ್ತುಕೊಂಡು ನಿಂತಾನ್ಮ್ಯ
ಗುಡ್ಡವ ಹೊತ್ತುಕೊಂಡು ನಿಂತು ಸುರರನು ದೊಡ್ಡವರನ್ನಾಗಿ ಮಾಡ್ಯಾನ್ಮ್ಯ |೨|
ಚಿನ್ನಕಾಡಿನ ಹಂದಿಯಾಗಿ ನಮ್ಮ ರಂಗ ಚಿನ್ನದಕಣ್ಣನ ಕೊಂದಾನ್ಮ್ಯ
ಚಿನ್ನದಕಣ್ಣನ ಕೊಂದು ಭೂಮಿಯ ವನಜಸಂಭವಗಿತ್ತಾನ್ಮ್ಯ |೩|
ಸಿಟ್ಟಿಲಿ ಸಿಂಹನಾಗಿ ನಮ್ಮ ರಂಗ ಹೊಟ್ಟೆಯ ಕರುಳ ಬಗೆದಾನ್ಮ್ಯ
ಹೊಟ್ಟೆಯ ಕರುಳ ಹಾರವ ಮಾಡಿ ಪುಟ್ಟಗೆ ವರವ ಕೊಟ್ಟಾನ್ಮ್ಯ |೪|

ಹುಡುಗ ಹಾರುವನಾಗಿ ನಮ್ಮ ರಂಗ ಬೆಡಗಲಿ ಮುಗಿಲಿಗೆ ಬೆಳೆದಾನ್ಮ್ಯ

ಬೆಡಗಲಿ ಮುಗಿಲಿಗೆ ಬೆಳೆದು ಬಲಿಯನು ಅಡಿಯಲಿ ಪಾತಾಳಕೊತ್ತಾನ್ಮ್ಯ |೫|

ತಾಯ ಮಾತನ ಕೇಳಿ ಸಾವಿರ ತೋಳಿನ ಆವಿನ ಕಳ್ಳನ ಕೊಂದಾನ್ಮ್ಯ

ಆವಿನ ಕಳ್ಳನ ಕೊಂದು ಭೂಮಿಯ ಅವನಿಗೆ ಸುರರಿಗಿತ್ತಾನ್ಮ್ಯ |೬|

ಪಿಂಗಳ ಕಣ್ಣಿನ ಕೊಂಗಗಳನು ಕೂಡಿ ಛಂಗನೆ ಲಂಕೆಗೆ ಪೋದಾನ್ಮ್ಯ

ಛಂಗನೆ ಲಂಕೆಗೆ ಪೋಗಿ ನಮ್ಮ ರಂಗ' ಹೆಂಗಸುಗಳ್ಳನ ಕೊಂದಾನ್ಮ್ಯ |೭|

ಕರಿಯ ಹೊಳೆಯಲಿ ತುರುಗಳ ಕಾಯುತ ಉರಗನ ಮಡುವ ಧುಮುಕ್ಯಾನ್ಮ್ಯ

ಉರಗನ ಹೆಡೆಮೇಲೆ ಹಾರ್ಹಾರಿ ಕುಣಿವಾಗ ವರವ ನಾರಿಯರಿಗೆ ಕೊಟ್ಟಾನ್ಮ್ಯ |೮|

ಕಂಡಕಂಡಲ್ಲಿ ಕುಂಡೆಯ ಬಿಟುಕೊಂಡು ಭಂಡತನದಲಿ ನಿಂತಾನ್ಮ್ಯ

ಭಂಡತನದಲಿ ನಿಂತು ತ್ರಿಪುರರ ಹೆಂಡಿರನೆಲ್ಲ ಕೆಡಿಸ್ಯಾನ್ಮ್ಯ |೯|

ಚೆಲ್ವ ಹೆಂಡತಿಯ ಕುದುರೆಯ ಮಾಡಿ ಒಳ್ಳೆಯ ರಾವುತನಾದಾನ್ಮ್ಯ

ಒಳ್ಳೆಯ ರಾವುತನಾಗಿ ಮ್ಲೇಚ್ಛರ ಡೊಳ್ಳುಹೊಟ್ಟೆಯ ಮೇಲೆ ಒದ್ದಾನ್ಮ್ಯ |೧೦|

ಡೊಳ್ಳಿನ ಮೇಲ್ ಕೈಯ ಭರಮಪ್ಪ ಹಾಕ್ಯಾನು ತಾಳವ ಶಿವನಪ್ಪ ತಟ್ಟ್ಯಾನ್ಮ್ಯ

ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನು ಚೆಲುವ ಕನಕಪ್ಪ ಕುಣಿದಾನ್ಮ್ಯ |೧೧|

---

೧೧.

ಎಲ್ಲಿಂದ ಬಂದೆ ಮುಂದೆತ್ತ ಪಯಣ

ಇಲ್ಲಿ ನಿನಗೆಷ್ಟುದಿನವಾಲಸ್ಯ ಮರುಳೆ | ಪ |

ಮಾತೆಯುದರದೊಳು ನವಮಾಸ ಮಲ ಮೂತ್ರದೊಳು

ಯಾತನೆಯ ಯೋನಿಮುಖ ಮಾರ್ಗವಿಡಿದು
ಭೂತಳಕೆ ಬಂದು ಹದನೇನ ತೀರಿಸಿಕೊಂಡೆ
ಜಾತಿ ಯಾವುದು ನಿನ್ನ ಹೆಸರೇನು ಮರುಳೆ | ೧ |

ಮುಂದಾವ ಪಥವ ಸೇರುವೆ ಮರುಳೆ ಸಾಕಿನು
ಹಿಂದೆ ನಿನವರಾರು ಆಪ್ತರುಂಟೆ
ಒಂದುಗೂಡಿದ ಪತಿಸುತರೆಲ್ಲ ವರ್ಜಪರು
ನಿಂದು ಮಾತಾಡು ಬಳಲಿದೆ ಬರಿದೆ ಮರುಳೆ | ೨ |

ಬರವಿದೇತಕೆ ನಿನ್ನ ಸ್ಥಳವೆಲ್ಲಿ ನೆಲೆಯಾಗಿ
ಇರುವ ಮಂದಿರವಾವುದದನೆಗೆ ಪೇಳೊ
ಧರೆಯೊಳಗೆ ವರಕಾಗಿ ನೆಲೆಯಾದಿ ಕೇಶವನ
ಸಿರಿಚರಣಕಮಲವನು ನೆರೆನಂಬಿ ಸುಖಿಸೊ | ೩ |

---

೧೨.

ಈತನೀಗ ವಾಸುದೇವನು | ಪ |

ಈತನೀಗ ವಾಸುದೇವ ಈ ಸಮಸ್ತ ಭುವನದೊಡೆಯ
ದೂತಗೊಲಿದು ತೇರನೇರಿ ಹಿತದಿ ತೇಜಿ ನಡೆಸಿದಾತ | ಅ ಪ |
ಧನುಜೆಯಾಳ್ದನಣ್ಣ ನಣ್ಣನ ಪಿತನ ಮುತ್ತಿ ಕೌರವೇಶನ

ಅನುಜೆಯನಾಳಿದವ ಶಿರವನು ಛೇದಿಸಿ - ತನ

ಅನುಜೆಯಾಳಿದವನು ಬೆಂಕಿ ತಿನದಂತೆ ಕಾಯ್ದ ರುಕ್ಮ -

ನನುಜೆಯಾಳದವನ ಮೂರ್ತಿಯನು ನೋಡಿರೊ |೧|

ವ್ಯೋಮಕೇಶನಿಪ್ಪ ದೆಸೆಯು ನಾಲ್ಕು ಜಗಕೆ ತೋರುತಿಪ್ಪ

ಸಾಮಜವನೇರಿ ಬಪ್ಪನನು ಕಾಣುತ

ಪ್ರೇಮದಿಂದ ಉರದೊಳಾಂತು ಡಿಂಗರಿಗನನು ಕಾಯ್ದ

ಸೋಮ ಕುಲದ ಭಾರವನು ಪೊತ್ತ ದೇವನು |೨|

ಕ್ರೂರವಾದ ಫಣಿಷಬಾಣ ಘೋರ್ಗುಡಿಸುತಿರಲು ಜಗಕೆ

ವೀರನನು ಮುಸುಕಿ ಬಪ್ಪುದನು ಕಾಣುತ

ಭೂರಮಣಿಯನೊತ್ತಿ ಅಡಿಗೆ ಬೀಗನ ಶಿರವನು ಕಾಯ್ದ

ಶ್ರೀರಮಣ ಆದಿಕೇಶವನನು - ನೋಡಿರೋ |೩|

---

೧೩.

**ಏನೆಂದು ಕೊಂಡಾಡಿ ಸ್ತುತಿಸಲೋ ದೇವ**

ನಾನೇನು ಬಲ್ಲೆ ನಿಮ್ಮ ಮಹಿಮೆಗಳ ಮಾಧವ |ಪ|

ಹರಿ ಮುಕಂದನು ನೀನು, ನರಜನ್ಮ ಹುಳುನಾನು

ಪರಮಾತ್ಮ ನೀನು ಪಾಮರನು ನಾನು

ಗರುಡಗಮನನು ನೀನು ಮರಳು ಪಾಪಿಯು ನಾನು

ಪರಮಜ್ಯೋತಿಯು ನೀನು ದುರುಳನು ನಾನು |೧|

ಅಣುರೇಣು ತೃಣಗಳಲಿ ಪರಿಪೂರ್ಣನೈ ನೀನು
ಕ್ಷಣ ಕ್ಷಣಕೆ ಅವಗುಣದ ಕರ್ಮಿ ನಾನು
ವಾಣಿಯರಸನ ಪೆತ್ತ ವೈಕುಂಟಪತಿ ನೀನು
ತನುನಿತ್ಯವಲ್ಲದಾ ಬೊಂಬೆ ನಾನು | ೨ |
ಕಂಬದಲಿ ಬಂದ ಆನಂದಮೂರುತಿ ನೀನು
ನಂಬಿಗೆಯ ಇಲ್ಲದ ಪ್ರಪಂಚಕನು ನಾನು
ಅಂಬರೀಷಗೆ ಒಲಿದ ಅಕ್ರೂರಸಖ ನೀನು
ಡಂಬಕರ್ಮಿಯು ನಾನು ನಿರ್ಜಿತನು ನೀನು | ೩ |
ವಾರಧಿಸಯನಾದ ಕಾರುಣ್ಯನಿಧಿ ನೀನು
ಘೋರದಿಂದಿಹ ಕಾಮಿ ಕ್ರೋಧಿ ನಾನು
ಈರೇಳು ಭುವನದೊಳು ಇರುವ ಮೂರುತಿ ನೀನು
ದೂರಿ ನಿನಯ ಬಯ್ಯ ದುಷ್ಟ ನಾನು | ೪ |
ತಿರುಪತಿಯ ವಾಸ ಶ್ರೀ ವಂಕಟೇಶನೆ ನಿನ
ಚರಣಸೇವಕರ ಸೇವಕನು ನಾನು
ಬಿರುದುಳ್ಳವನು ನೀನು ಮೊರೆಹೊಕ್ಕನೈ ನಾನು
ಸಿರಿ ಕಾಗಿನೆಲೆಯಾದಿಕೇಶವನು ನೀನು | ೫ |

---

೧೪.

ಏಳು ನಾರಾಯಣ ಏಳು ಲಕ್ಷ್ಮೀರಮಣ
ಏಳು ಶ್ರೀಗಿರಿಯೊಡೆಯ ಶ್ರೀ ವೆಂಕಟೇಶ ಏಳಯ್ಯ ಬೆಳಗಾಯಿತು | ಪ |

ಕಾಸಿದ್ದಹಾಲನು ಕಾವಡಿಯೊಳು ಹೆಪ್ಪಿಟ್ಟು
ಲೇಸಾಗಿ ಕಡೆದ ಹೊಸ ಬೆಣ್ಣೆ ಕೊಡುವೆ
ಶೇಷ ಶಯನನೆ, ಏಳು ಸಮುದ್ರ ಮಥನವ ಮಾಡು
ದೇಶ ಕೆಂಪಾಯಿತಲ್ಲಯ್ಯ ಹರಿಯೇ |೧|
ಅರುಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪವನು
ಸುರರು ತಂದಿದ್ದಾರೆ ಬಲು ಭಕುತಿಯಲಿ
ಅರವಿಂದನಾಭ ಸಿರಿ ವಿದಿ ಭವಾದಿಗಳೊಡೆಯ
ಪಿರಿದಾಗಿ ಕೋಳಿ ಕೂಗಿತೇಳಯ್ಯ ಹರಿಯೇ |೨|
ದಾಸರೆಲ್ಲರು ಬಂದು ಧೂಳಿ ದರ್ಶನಗೊಂಡು
ಲೇಸಾಗಿ ತಾಳ ದಂಡಿಗೆಯ ಪಿಡಿದು
ಶ್ರೀಶಾದಿಕೇಶವನೆ ನಿಮ್ಮ ಪಾದಗಳನು ಲೇಸಾಗಿ
ಸ್ಮರಿಸಿ ಪೊಗಳುವರು ಹರಿಯೇ |೩|

---

೧೫.

**ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ**
**ಕುಲದ ನೆಲೆಯನೇನಾದರೂ ಬಲ್ಲಿರಾ |ಪ|**

ಹುಟ್ಟಿದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲವೊ
ಗುಟ್ಟುಕಾಣಿಸೆ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ |೧|

ಜಲವೆ ಸಕಲ ಕುಲಕ್ಕೆ ತಾಯಿಯಲ್ಲವೆ ಆ

ಜಲಕುಲವನೇನಾದರೂ ಬಲ್ಲಿರಾ

ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ಈ ದೇಹ

ನೆಲೆಯನರಿತು ನೀ ಹರಿಯ ನೆನೆ ಮನುಜ | ೨ |

ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ

ಹರಿಮಯವೆಲ್ಲವೆನುತ ತಿಳಿದು

ಸಿರಿಕಾಗಿನೆಲೆಯಾದಿಕೇಶವರಾಯನ

ಚರಣಕಮಲವನು ಕೀರ್ತಿಸುವನೆ ಕುಲಜ | ೩ |

---

೧೬.

ತೊರೆದು ಜೀವಿಸಬಹುದೆ ಹರಿ ನಿನ್ನ ಚರಣಗಳ

ಮರೆಯ ಮಾತೇಕಿನು ಅರಿತು ಪೇಳುವೆನು | ಪ |

ತಾಯಿತಂದೆಯ ಬಿಟ್ಟು ತಪವ ಮಾಡಲುಬಹುದು

ದಾಯದಿ ಬಂಧುಗಳ ಬಿಡಲುಬಹುದು

ರಾಯ ತಾ ಮುನಿದರೆ ರಾಜ್ಯವನು ಬಿಡಬಹುದು

ಕಾಯಜನಪಿತ ನಿನ ಅಡಿಯ ಬಿಡಲಾಗದು | ೧ |

ಒಡಲು ಹಸಿಯಲು ಅನವಿಲ್ಲದಲೆ ಇರಬಹುದು

ಪಡೆದ ಕ್ಷೇತ್ರವ ಬಿಟ್ಟು ಪೋಗಬಹುದು

ಮಡದಿ ಮಕ್ಕಳ ಕಡೆಗೆ ತೊಲಗಿಸಿಯೆಬಿಡಬಹುದು

ಕಡಲೊಡೆಯ ನಿನಡಿಯ ಗಳಿಗೆ ಬಿಡಲಾಗದು | ೨ |

ಪ್ರಾಣವನು ಪರರು ಬೇಡಿದರೆತ್ತಿಕೊಡಬಹುದು
ಮಾನದಲಿ ಮನವ ತಗ್ಗಿಸಲುಬಹುದು
ಪ್ರಾಣನಾಯಕನಾದ ಆದಿಕೇಶವರಾಯ
ಜಾಣ ಶ್ರೀಕೃಷ್ಣ ನಿನಡಿಯ ಬಿಡಲಾಗದೊ | ೩ |

---

೧೭.

ದಾಸದಾಸರ ಮನೆಯ ದಾಸಾನುದಾಸ ನಾನು
ಶ್ರೀಶ ಶ್ರೀರಂಗ ನಿಮ್ಮ ಮನೆಯ ದಾಸ | ಪ |
ಕಾಳುದಾಸರ ಮನೆಯ ಆಳು ದಾಸ ನಾನಯ್ಯ
ಕೀಳುದಾಸನು ನಾನು ಕಿರಿಯ ದಾಸ
ಭಾಳಾಕ್ಷ ಮುಂತಾಗಿ ಭಜಿಪ ದೇವರ ಮನೆಯ
ಆಳಿನ ಆಳಿನ ಆಳಿನಡಿದಾಸ ನಾನು | ೧ |
ಪಂಕಜನಾಭನ ಮನೆಯ ಮುಂಕುದಾಸನಯ್ಯ
ಕೊಂಕುದಾಸನು ನಾನು ಕುರುಡು ದಾಸ
ಸಂಕೀರ್ತನೆಯ ಮಾಡಿ ನೆನೆವ ಭಕ್ತರ ಮನೆಯ
ಬಂಕದ ಬಾಗಿಲ ಕಾಯ್ವ ಬಡದಾಸ ನಾನು | ೨ |
ಹಲವು ದಾಸರ ಮನೆಯ ಹೊಲೆದಾಸ ನಾನಯ್ಯ
ಕುಲವಿಲ್ಲದ ದಾಸ ಕುನಿದಾಸ
ಮಲಹರ ರಂಗ ನಿನ ಮನೆಯ ಮಾದಿಗ ದಾಸ
ಸಲೆಮುಕ್ತಿ ಪಾಲಿಸೊ ಆದಿಕೇಶವರಾಯ | ೩ |

---

೧೮.

**ದುರ್ಜನರ ಸಂಗ ಕೊಡಬ್ಯಾಡ ಹರಿಯೇ**

ಸಜ್ಜನರ ಸಂಗದೊಳಿಗಿರಿಸೆನ್ನ **ರಂಗಾ** |ಪ|

ಉಂಡುಮನೆಗೆರಡನು ಎಣಿಸುವಾತನ ಸಂಗ
ಕೊಂಡೆಯುವ ಪೇಳಿ ಕಾದುವನ ಸಂಗ
ತಂದೆತಾಯ್ಗಳ ಜರಿದು ಬಾಧಿಸುವನ ಸಂಗ
ನಿಂದಕರ ಸಂಗ ಬಹು ಭಂಗ ರಂಗ |೧|

ನಂಬಿದಾ ಠಾವಿನಲ್ಲಿ ಕೇಡೆಣಿಪನ ಸಂಗ
ಸಂಭ್ರಮದಿ ಜಗಳ ಕಾಯುವನ ಸಂಗ
ಹಂಬಲಿಸಿ ಭವದ ಸುಖ ನಂಬಿದಾತನ ಸಂಗ
ರಂಭೆ ಸ್ತ್ರೀಯರ ನೋಡಿ ಮೋಹಿಪನ ಸಂಗ ಬ್ಯಾಡ |೨|

ಕುಳಿತಿಹ ಸಭೆಯೊಳಗೆ ಕುಹಕ ಮಾಡ್ವನ ಸಂಗ
ಬಲು ಬೇಡೆ ಕೊಡದಿಹ ಲೋಭಿಯ ಸಂಗ
ಕುಲಹೀನರ ಕೂಡಿ ಸ್ನೇಹ ಮಾಡ್ವನ ಸಂಗ
ಹಲವು ಮಾತಾಡಿ ಆಚರಿಸುವನ ಸಂಗ |೩|

ಗುರುಸತಿಗೆ ಪರಸತಿಗೆ ಎರಡು ಎಣಿಪನ ಸಂಗ
ಗುರುನಿಂದೆ ಪರನಿಂದೆ ಮಾಳ್ಪನ ಸಂಗ
ಪರಹಿತಾರ್ಥದ ಮರ್ಮ ಅರಿಯದಾತನ ಸಂಗ
ಪರಮ ಪಾಮರರ ಸಂಗ ಬಹು ಭಂಗ ರಂಗಾ |೪|

ಆಗಮ ಮಹಾತ್ಮೆಯನು ಅರಿಯದಾತನ ಸಂಗ
ಯೋಗಿಜನ ಗುರುಜನರ ನಿಂದಿಪನ ಸಂಗ
ರಾಗದ್ವೇಷಾದಿಯಲಿ ಮುಳುಗೇಳುವನ ಸಂಗ
ಕಾಗಿನೆಲೆಯಾದಿ ಕೇಶವ ಬಿಡಿಸೊ ಈ ಭಂಗಾ |೫|

---

೧೯.

ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ
ಕೂಗಿದರು ಧ್ವನಿ ಕೇಳಲಿಲ್ಲವೇ ನರಹರಿಯೆ |ಪ|
ಪರಮಪದದೊಳಗೆ ವಿಷಧರನ ತಲ್ಪದಲಿ ನೀ
ಸಿರಿ ಸಹಿತ ಕ್ಷೀರವಾದಿಯೊಳಿರಲು
ಕರಿರಾಜ ಕಷ್ಟದಲಿ ಆದಿಮೂಲಾ ಎಂದು
ಕರೆಯಲಾಕ್ಷಣ ಬಂದು ಒದಗಿದೆಯೊ ನರಹರಿಯೆ |೧|
ಕಡುಕೋಪದಿಂ ಖಳನು ಖಡುಗವನು ಪಿಡಿದು ನಿ
ನೊಡೆಯನೆಲ್ಲಿಹನೆಂದು ನುಡಿಯೆ
ದೃಡಭಕುತಿಯಲಿ ಶಿಶುವು ಬಿಡದೆ ನಿನನು ಭಜಿಸೆ
ಸಡಗರದಿ ಕಂಬದಿಂದೊಡೆದೆ ನರಹರಿಯೆ |೨|
ಯಮಸುತನ ರಾಣಿಗಕ್ಷಯವಸನವನಿತ್ತೆ
ಸಮಯದಲಿ ಅಜಮಿಳನ ಪೊರೆದೆ
ಸಮಯಾಸಮಯವುಂಟೆ ಭಕ್ತವತ್ಸಲ ನಿನಗೆ
ಕಮಲಾಕ್ಷ ಕಾಗಿನೆಲೆಯಾದಿಕೇಶವನೆ |೩|

೨೦.

ಸತ್ಯವಂತರ ಸಂಗವಿರಲು ತೀರ್ಥವೇತಕೆ
ನಿತ್ಯ ಅನದಾನವಿರಲು ಭಯವು ಏತಕೆ | ಪ |

ಗುರುಹಿರಿಯರ ಅರಿಯದವನ ಅರಿವದೇತಕೆ
ಪರಹಿತಾರ್ಥಕಿಲ್ಲದವನ ಶರೀರವೇತಕೆ
ಹರಿಯ ಪೂಜೆ ಮಾಡದವನ ಜನುಮವೇತಕೆ
ಸೇರಿದವರ ಹೊರೆಯದಂಥ ದೊರೆಯು ಏತಕೆ | ೧ |

ಮಾತು ಕೇಳದ ಮಲೆತುನಡೆವ ಮಕ್ಕಳೇತಕೆ
ಭೀತನಾಗಿ ಓಡಿಬರುವ ಬಂಟನೇತಕೆ
ಪ್ರೀತಿಯಿಂದ ಎಡೆಯನಿಕ್ಕದ ಊಟವೇತಕೆ
ಸೋತ ಹೆಣ್ಣಿಗೆ ಇದಿರು ನಡೆವ ಸುಗುಣನೇತಕೆ | ೨ |

ತಾನು ಉಣ್ಣದ ಪರರಿಗಿಕ್ಕದ ಧನವಿದ್ದೇತಕೆ
ಮಾನಹೀನವಾಗಿ ಬಾಳ್ವ ಮನುಜನೇತಕೆ
ನ್ಯೂನ ಹೆಚ್ಚು ನೋಡುವಲ್ಲಿ ಇರುವುದೇತಕೆ
ತನ ಬಳಗವೆರಸಿ ಉಣ್ಣದ ಭಾಗ್ಯವೇತಕೆ | ೩ |

ತಾನು ತನನರಿಯದಂಥ ಪ್ರೌಢನೇತಕೆ
ಸಾನ ಸಂದ್ಯಾನವಿಲ್ಲದ ಶೀಲವೇತಕೆ
ಜ್ಞಾನವಿಲ್ಲದೆ ನೂರುಕಾಲ ಬದುಕಲೇತಕೆ
ದ್ಯಾನದೊಳಗೆ ಕೃಷ್ಣನಿಲ್ಲದ ತನುವಿದ್ದೇತಕೆ |೪|

ಸನೆಯರಿತು ನಡೆಯುದಂಥ ಸತಿಯಿದ್ದೇತಕೆ
ಭಿನವರಿತು ನಡೆಯುವಂಥ ಸೇಹವೇತಕೆ
ಮುನ ಕೊಟ್ಟು ಹುಟ್ಟಲಿಲ್ಲ ಬಯಸಲೇತಕೆ
ಚಿನ ಆದಿಕೇಶವನಿರಲು ದೈವವೇತಕೆ |೫|

---

೨೧.

ನಾನು ನೀನು ಎನದಿರೋ ಹೀನಮಾನವ
ಜ್ಞಾನದಿಂದ ನಿನ ನೀನೆ ತಿಳಿದುನೋಡೆಲೊ ಪ್ರಾಣಿ |ಪ|
ಹೆಣ್ಣು ಹೊನ್ನು ಮಣ್ಣು ಮೂರು ನಿನ್ನವೇನೆಲೊ
ಅನ್ನದಿಂದ ಬಂದ ಕಾಮ ನಿನದೇನೆಲೊ
ಕರ್ಣದಿಂದ ಬರುವ ಘೋಷ ನಿನದೇನೆಲೊ
ನಿನ ಬಿಟ್ಟುಹೋಹ ಜೀವ ನಿನದೇನೆಲೊ |೧|
ಹಲವು ಜನ್ಮದಿಂದ ಬಂದಿರುವನು ನೀನೆಲೊ
ಮಲದ ಗರ್ಭದಲ್ಲಿ ನಿಂದಿರುವನು ನೀನೆಲೊ
ಜಲದ ದಾರಿಯಲ್ಲಿ ಬಂದಿರುವನು ನೀನೆಲೊ

ಕುಲವು ಜಾತಿಗೋತ್ರಗಳ್ಳುವನು ನೀನೆಲೊ | ೨ |
ಕಾಲ ಕರ್ಮ ಶೀಲ ನೇಮ ನಿನದೇನೆಲೊ
ಜಾಲವಿದ್ಯ ಬಯಲಮಾಯೆ ನಿನದೇನೆಲೊ
ಕೀಲು ಜಡಿದ ಮರದಬೊಂಬೆ ನಿನದೇನೆಲೊ
ಲೋಲ ಆದಿಕೇಶವ ಭಕ್ತನಾಗೆಲೊ | ೩ |

---

೨೨.

ನಿನ್ನ ನಾನೇನೆಂದೋನೊ - ರಂಗಯ್ಯ ರಂಗ
ನಿನ್ನ  ನಾನೇನೆಂದೆನೊ | ಪ |
ನಿನ್ನ ನಾನೇನೆಂದೆ ಚಿನ್ಮಯ ಮೂರುತಿ
ಪನ್ನಗಶಯನ ಪಾಲ್ಗಡಲೊಡೆಯನೆ ಕೃಷ್ಣ | ಅಪ |
ಧೀರ ಸೋಮಕ ವೇದಚೋರನ ಮಡುಹಿದೆ
ವಾರಿಧಿಗಿಳಿದ ಪರ್ವತವ ಪೊತ್ತೆ
ಧಾರಿಣಿಯನು ತಂದು ದನುಜದಲ್ಲಣನಾದೆ
ನಾರಸಿಂಹ ನಿನಗೆ ನಮೋ ಎಂದೆನಲ್ಲದೆ
ನೀರ ಪೊಕ್ಕವನೆಂದನೇ ಬೆನ್ನಿನ ಮೇಲೆ
ಭಾರ ತಾಳ್ದವನೆಂದನೇ ಮಣ್ಣನಗಿದು
ಬೇರ ಮೆದ್ದವನೆಂದನೇ ರಕ್ಕಸರೊಳು
ಹೋರಾಡಿದವನೆಂದನೇ ರಕ್ಕಸರೊಳು
ಹೋರಾಡಿದವನೆಂದು ಹೊಗಳಿದೆನಲ್ಲದೆ | ೧ |

ಧರೆಯ ದಾನವ ಬೇಡಿ ನೆಲವ ಮೂರಡಿ ಮಾಡಿ
ಪರಶುವುಡುದು ಕ್ಷತ್ರಿಯರ ಸವರಿ
ಚರಣದಿ ಪಾಷಣ ಹೆಣ್ಣುಮಾಡಿದ ಪುಣ್ಯ
ಚರಿತ ಯಾದವಪತಿ ಶರಣೆಂದೆನಲ್ಲದೆ
ತಿರುಕ ಹಾಕುವನೆಂದೆನೆ ಹೆತ್ತ ತಾಯ
ಶಿರಕೆ ಮುನಿದವನೆಂದನೆ ವನದೇಶದಿ
ಧುರಕೆ ನಿಂದವನೆಂದೆನೆ  ಪೂತನಿಯ ಮೊಲೆಯ
ಹರಿದು ಕೊಂದವನೆಂದು ಸ್ತುತಿಸಿದೆನಲ್ಲದೆ | ೨ |
ಚಿತ್ತಜಕೋಟಿಲಾವಣ್ಯ ಮುಪ್ಪರದೊಳು
ಉತ್ತಮಸ್ತ್ರೀಯರ ವ್ರತವಳಿದೆ
ಮತ್ತೆ ಕಲ್ಕಿಯಾಗಿ ಮಲೆತರ ಮಡುಹಿದೆ
ಉತ್ತಮ ಶ್ರೀರಾಮನೆಂದು ಸ್ತುತಿಸಿದೆನಲ್ಲದೆ
ಬತ್ತಲೆನಿಂತನವನೆಂದನೆ ತೇಜಿಯನೇರಿ
ಒತ್ತಿಬಾಹವನೆಂದನೆ ಬಾರಿಬಾರಿಗೆ
ಸತ್ತುಹುಟ್ಟುವನೆಂದನೆ ಆದಿಕೇಶವ
ಹತ್ತವತಾರದ ಹರಿಯೆಂದೆನಲ್ಲದೆ | ೩ |

---

೨೩.

ಇಂದು ಸ್ಯೆರಿಸಿರಿ ಶ್ರೀಕೃಷ್ಣನ ತಪ್ಪ
ಮುಂದಕೆ ನಿಮ್ಮ ಮನೆಗೆ ಬಾರೆನಮ್ಮ | ಪ |

ಮಗುವು ಬಲ್ಲುದೆ ಇಷ್ಟು ಬೆಣ್ಣೆಯ ಕದ್ದರೆ
ಬಿಗಿಯಬಹುದೆ ಶ್ರೀಚರಣವನು
ಅಗಣಿತ ಮಹಿಮನ ಅಂಜಿಸಲೇಕಮ್ಮ
ಬಗಿಯಬಾರದೆ ನಿಮ್ಮ ಮಕ್ಕಳಂತೆ | ೧ |
ಹಸುಮಗುವನು ಕಂಡು ಮುದ್ದಿಸಲೊಲ್ಲದೆ
ಪುಸಿಗ ಕಳ್ಳನೆಂದು ಕಟ್ಟಿವಿರಿ
ವಸುಧೆಯೊಳಗೆ ನಾನೊಬ್ಬಳೆ ಪಡೆದೆನೆ ನಿಮ್ಮ
ಹಸುಮಗುವೆಂದು ಭಾವಿಸಬಾರದೆ | ೨ |
ಎಷ್ಟೋ ಬಾರಿಯ ನಾ ಬೇಡವೆಂದರು ಕೇಳ
ದುಷ್ಟ ಮಕ್ಕಳ ಕೂಡ ಒಡನಾಟವ
ಕಟ್ಟಿದ ನೆಲುವಿನ ಬೆಣ್ಣೆಯನೀವೆನು
ಬಿಟ್ಟು ಕಳುಹಿರಮ್ಮ ಆದಿಕೇಶವನ | ೩ |

---

೨೪.

ಕಷ್ಟಪಟ್ಟರೂ ಇಲ್ಲ ಕಳವಳಿಸಿದರಿಲ್ಲ
ಭ್ರಷ್ಟಮಾನವ ಹಣೆಯ ಬರೆಹವಲ್ಲದೆ ಇಲ್ಲ | ಪ |
ಸಿರಿವಂತನ ಸ್ನೇಹಮಾಡಿ ನಡೆದವರಿಲ್ಲ
ಪರಿಪರಿಯಲಿ ವಿದ್ಯ ಕಲಿತವರಿಲ್ಲ
ನರಿಯ ಬುದ್ಧಿಯಲಿ ನಡೆದುಕೊಂಡರು ಇಲ್ಲ

ಅರಿಯದೆ ಹಲವ ಹಂಬಲಿಸಿದರಿಲ್ಲ ||೧||
ಕೊಂಡೆಗಾರಿಕೆಯನು ಹೇಳಿ ನಡೆದರಿಲ್ಲ
ಕಂಡಕಂಡವರಿಗೆ ಕೈಮುಗಿದುರಿಲ್ಲ
ಗಂಡುಗತ್ತರಿಯನು ಕೊರಳಿಗಿಟ್ಟರು ಇಲ್ಲ
ಚಂಡನಾದರೂ ಇಲ್ಲ ಪರಿಹಾಸ್ಯವಲ್ಲ ||೨||
ಕಟ್ಟಾಳು ಕಂಡುಜಾಣನಾಗಿ ಪುಟ್ಟಿದವರಿಲ್ಲ
ಬೆಟ್ಟಗಳನು ಕಿತ್ತಿಟ್ಟರಿಲ್ಲ
ಸೃಷ್ಟಿಯೊಳು ಕಾಗಿನೆಲೆಯಾದಿಕೇಶವರಾಯ
ಕೊಟ್ಟವರಿಗೆ ಉಂಟು ಕೊಡದವರಿಗೆ ಇಲ್ಲ ||೩||

---

೨೫.

ತನುವ ನೀರೊಳಗದ್ದಿ ಫಲವೇನು, ತನ್ನ ||ಪ||
ಮನದಲ್ಲಿ ದೃಢಭಕ್ತಿಯಿಲ್ಲದ ಮನುಜನ ||ಅಪ||
ದಾನಧರ್ಮಗಳನು ಮಾಡುವುದೇ ಸ್ನಾನ
ಜ್ಞಾನತತ್ತ್ವಂಗಳ ತಿಳಿಯುವುದೇ ಸ್ನಾನ
ಹೀನಪಾಶಂಗಳ ಹರಿಯುವುದೇ ಸ್ನಾನ
ಧ್ಯಾನದಿ ಮಾಧವನ ನೋಡುವುದೇ ಸ್ನಾನ ||೧||
ಗುರುಗಳ ಶ್ರೀಪಾದತೀರ್ಥವೇ ಸ್ನಾನ
ಹಿರಿಯರ ದರ್ಶನ ಮಾಡುವುದೇ ಸ್ನಾನ
ಕರೆದು ಅತಿಥಿಗೆ ಅನ್ನ ಇಡುವುದೇ ಸ್ನಾನ

ನರಹರಿ ಚರಣವ ನಂಬುವುದೇ ಸ್ನಾನ | ೨ |
ದುಷ್ಟರ ಸಂಗವ ಬಿಡುವುದೇ ಸ್ನಾನ
ಶಿಷ್ಟರ ಸಹವಾಸ ಮಾಡುವುದೆ ೞಸ್ನಾನ
ಸೃಷ್ಟಿಯೊಳಗೆ ಸಿರಿಪುರಂದರವಿಠಲನ
ಮುಟ್ಟಿಭಜಿಸಿ ಪುಣ್ಯಪಡೆವುದೆ ೞಸ್ನಾನ | ೩ |

---

೨೬.

ಪೂರ್ವಜನ್ಮದಲಿ ನಾ ಮಾಡಿದ ಭವದಿಂದ
ಉರ್ವಿಯೊಳು ಜನಿಸಿದೆನೊ ಕೃಷ್ಣ | ಪ |
ಕಾರುಣ್ಯನಿಧಿಯನ ಕಾಯಬೇಕಯ್ಯ ಹರಿ
ವಾರಿಜನಾಭನೇ ಮುದ್ದುಕೃಷ್ಣ | ಅಪ |
ಹುಟ್ಟಿದಂದಿಂದಿಗೂ ಸುಖವ ನಾ ಕಾಣದಲೆ ಕಷ್ಟನಾದೆನು ಕೇಲೊ ಕೃಷ್ಣ
ತೊಟ್ಟಲಿನ ಶಿಶು ತಾಯ ಬಿಟ್ಟತೆರನಂತೆ ಕಂಗೆಟ್ಟು ಸೊರಗಿದೆನಯ್ಯ ಕೃಷ್ಣ
ಮುಟ್ಟಲಮ್ಮರು ಎನ ಸತಿಸುತರು ಬಾಂದವರು ಅಟ್ಟಿ ಎಳೆಯುತ್ತಿಹರೊ ಕೃಷ್ಣ
ಕಷ್ಟ ದಾರಿದ್ರ್ಯವನು ಪರಿಹರಿಸದಿರೆ ದೂರು ಮುಟ್ಟುವುದು ನಿನಗಯ್ಯ ಕೃಷ್ಣ | ೧ |
ಕಾಶಿಯಾವಾಸವನು ಬಯಸಿ ಬಹುದಿನದಿಂದ ಆಸೆಯೊಳಗಿದ್ದೆನಯ್ಯ ಕೃಷ್ಣ
ಗಾಸಿಯನು ಮಾಡದಲೆ ದೋಷವನು ಪರಿಹರಿಸೊ ಸಾಸಿರನಾಮದ ಕೃಷ್ಣ
ಹೇಸಿಕೆಯೊಳಿರ್ದ ಸಂಸಾರವೆಂಬುವ ಮಾಯಪಾಶದಿಂದಲಿ ಬಿಗಿದರೇ ಕೃಷ್ಣ
ಕಂಸಮರ್ದನನೆ ನೀ ಕಾಯಬೇಕಯ್ಯ ಹರಿವಾಸುದೇವನೆ ಮುದ್ದುಕೃಷ್ಣ | ೨ |
ಲೋಕದೊಳಗೆನನು ಪೋಲ್ವ ಪಾಪಿಗಳನು ನೀ ಕಂಡು ಬಲ್ಲೆಯಾ ಕೃಷ್ಣ

ಸಾಕಿನು ಎನಗೊಂದು ಗತಿಯ ತೋರಿಸಿ ಸದ್ವಿವೇಕಿಯನೆ ಮಾಡಯ್ಯ ಕೃಷ್ಣ
ರಾಕೇಂದುಮುಖಿ ದ್ರೌಪದಿಯ ಮಾನವ ಕಾಯ್ದೆ ಆಕೆಗಕ್ಷಯವಿತ್ತೆ ಕೃಷ್ಣ
ಪಿನಾಕಿಸಖ ಆದಿಕೇಶವನ ಉಡುಪಿಯ ವಾಸ ಸಾಕಿ ಸಲಹೈ ಎನ್ನ ಕೃಷ್ಣ | ೩ |

೨೭.

**ಹಣ್ಣು ಕೊಂಬುವ ಬನ್ನಿರಿ ಹರಿದಾಸರು**

**ಹಣ್ಣು ಕೊಂಬುವ ಬನ್ನಿರಿ | ಪ |**

ಚೆನ್ನ ಬಾಲಕೃಷ್ಣನೆಂಬ ಕನೆಗೊನೆಬಾಳೆಹಣ್ಣು | ಅಪ |
ಸುತ್ತೇಳು ಲೋಕದಿ ಸುರರು ಬಿತ್ತಿದ ಹಣ್ಣು
ಭಕ್ತರ ಬಾಯೊಳು ನೆನೆವ ಹಣ್ಣು
ಅರ್ತಿಯುಳ್ಳವರೆಲ್ಲ ಕೊಳ್ಳಿಬೇಕಾದರೆ
ನಿತ್ಯ ಮಾಧವನೆಂಬ ಅಚ್ಚಮಾವಿನ ಹಣ್ಣು | ೧ |
ಅಜನ ಪಡೆದ ಹಣ್ಣು ಗಜವ ಕಾಯ್ದ ಹಣ್ಣು
ನಿಜಮುನಿಗಳಿಗೆ ತೋರಿಸಿದ ಹಣ್ಣು
ತ್ರಿಜಗವಂದಿತ ಪಾಲ್ಗಡಲೊಡೆಯನೆ ಹಣ್ಣು
ಸುಜನಭಕ್ತರೆಲ್ಲ ಕೊಳ್ಳಬನ್ನಿರಿ ಹಣ್ಣು | ೨ |
ತುರುವ ಕಾಯ್ದ ಹಣ್ಣು ಉರಗನೆ ತುಳಿದಾ ಹಣ್ಣು
ಕರೆದರೆ ಕಂಬದೊಳು ಓಯೆಂಬ ಹಣ್ಣು
ಮರುಗುವ ಧ್ರುವನಿಗೆ ಪಟ್ಟಗಟ್ಟಿದ ಹಣ್ಣು

**ಕರುಣಾಳು ಕಾಗಿನೆಲೆಯಾದಿಕೇಶವ ಹಣ್ಣು ||೩||**